ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್ಎಫ್‌ಸಿ ನ್ಯಾಯಾಲಯ, ಹುಬ್ಬಳ್ಳಿ
ಸಿಸಿ ನಂಃ 1823 ಃ 2015

ಸಿಡಬ್ಲೂ - 13
ಪಿಡಬ್ಲೂ- 7

ಸಾಕ್ಷಿಯ ಹೆಸರು : ವೆಂಕಪ್ಪ ಸೋಮರೆಡ್ಡಿ

ತಂದೆಯ ಹೆಸರು : ಮಹಾದೇವಪ್ಪ

ವಯಸ್ಸು : 49 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಇಂಗಳಹಳ್ಳಿ

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಿದ ದಿನಾಂಕಃ 02.08.2018
ಮುಖ್ಯ ವಿಚಾರಣೆ ಎಪಿಪಿ ಯವರಿಂದ :

ಚಾಸಾ 14 ನನಗೆ ಗೊತ್ತು ಅವರು ಮತ್ತು ನಾನು ಒಂದೇ ಊರಿನವರು. ಆರೋಪಿತರನ್ನು ನಾನು ಮುಂಚೆ ನೋಡಿಲ್ಲ. ಈ ಕೇಸಿನಲ್ಲ ಯಾರು ಯಾರ ಮೇಲೆ ಯಾವ ಕಾರಣಕ್ಕೆ ದೂರನ್ನು ಕೊಟ್ಟಿದ್ದಾರೆ ಎಂಬುವುದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮುದ್ದೇಮಾಲುಗಳನ್ನು ವಶಪಡಿಸಿಕೊಂಡಿದ್ದನ್ನು ನಾನು ನೋಡಿರುವುದಿಲ್ಲ. ನಿಪಿ.2 ರಿಂದ 5 , ನಿಪಿ.9 ರಿಂದ 13 ರಲ್ಲಿ ಕಾಣುವ ವಾಹನ ಅಥವಾ ಹಣವನ್ನು ನಾನು ಈ ಮುಂಚೆ ನೋಡಿರುವುದಿಲ್ಲ. ಪೊಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಪಂಚನಾಮೆಯನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲು ಎಪಿಪಿ ಯವರಿಂದ :

ದಿ.20.05.2015 ರಂದು ಸಾ.4.15 ಗಂಟೆಗೆ ಗದಗ ರೋಡ್ ಮುಖಾಂತರ ರೇಲ್ವೆ ಹಳಿ ದಾಟಿ ಮುಂದೆ ನಾನು , ಚಾಸಾ 14 ರವರು ಹೊರಟಾಗ ಅಲ್ಲಿ ಪೊಲೀಸರು ಒಂದು ಟವೇರಾ ಗಾಡಿ ಸಂಖ್ಯೆ.ಜಿಜೆ.09/ಬಿಬಿ 4172 ನ್ನು ತಡೆ ಹಿಡಿದಿದ್ದು ಅದರಲ್ಲಿ ನ್ಯಾಯಾಲಯದ ಮುಂದೆ ಇರುವ 1 ರಿಂದ 8ನೇ ಆರೋತರು ಇದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರನ್ನು ಪೊಲೀಸರು ವಿಚಾರಣೆ ಮಾಡಿದಾಗ ಆ ಪೈಕಿ 1ನೇ ಆರೋಪಿತನು ನಾವು ಕಳ್ಳತನ ಮಾಡುವುದಕ್ಕೋಸ್ಕರ ಒಂದು ಟವೇರಾ ಕಾರ್ ನಂ.ಜಿಜೆ.09/ಬಿಬಿ 4172 , ಮೋಟಾರ ಸೈಕರ್ ಜಿಜೆ.01/ಎಲಎಸ್ 4453 , ಇನ್ನೊಂದು ಬೈಕ ಜಿಜೆ.01/ಎಸಪಿ 4826 , ಇನ್ನೊಂದು ಬೈಕ ಜಿಜೆ.01/ಟಿಎಸ್ 9855 ಹಾಗೂ ಇನ್ನೊಂದು ಬೈಕ್ ನಂ. ಜಿಜೆ.01/ಎನಜೆ 5891 ನ್ನು ಖರೀದಿಸಿ ಕಳ್ಳತನ ಮಾಡಲು ಒಳಸಂಚು ಹಾಕಿದ್ದೇವು ಎಂದು ಹೇಳಿದರು ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಮುಂದುವರೆದು ಧಾರವಾಡ ಉಪನಗರ

ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.81/2015 ರಲ್ಲಿ ಸಂಬಂಧಿಸಿದ ಮೂರು ಲಕ್ಷ ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಬೆಳಗಾವಿ ಕಡೇಬಜಾರ ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.41/2015 ರಲ್ಲಿ ಸಂಬಂಧಿಸಿದ ಒಂದು ಲಕ್ಷ ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಹುಬ್ಬಳ್ಳಿ ಉಪನಗರ ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.44/2015 ರಲ್ಲಿ ಸಂಬಂಧಿಸಿದಂತಹ ಎರಡು ಲಕ್ಷ ಅರವತ್ತು ಸಾವಿರ ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ರೀತಿ ಬೆಳಗಾವಿಯ ಮಾಳಮಾರುತಿ ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.60/2015 ರಲ್ಲಿ ಸಂಬಂಧಿಸಿದಂತಹ 95 ಸಾವಿರ ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ರೀತಿ ಹುಬ್ಬಳ್ಳಿ ಉಪನಗರ ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.8/2015 ರಲ್ಲಿ ಸಂಬಂಧಿಸಿದ ಹತ್ತು ಲಕ್ಷ ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ರೀತಿ ಹುಬ್ಬಳ್ಳಿ ಉಪನಗರ ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.185/2014 ರಲ್ಲಿ ಸಂಬಂಧಿಸಿದ ಒಂದು ಲಕ್ಷ ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ರೀತಿ ಕೊಪ್ಪಳ ಶಹರ ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.116/2014 ರಲ್ಲಿ ಸಂಬಂಧಿಸಿದ ಒಂದು ಲಕ್ಷ ಹದಿನಾರು ಸಾವಿರದ ಎಂಟನೂರಾ ತೊಂಭತ್ತೈದು ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ರೀತಿ ಗದಗ ಶಹರ ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.61/2014 ರಲ್ಲಿ ಸಂಬಂಧಿಸಿದ 70 ಸಾವಿರ ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ರೀತಿ ಗದಗ ಶಹರ ಪೊಲೀಸ ಠಾಣೆಯ ಗುನ್ನೆ ಸಂಖ್ಯೆ.33/2013 ರಲ್ಲಿ ಸಂಬಂಧಿಸಿದ ಆರು ಲಕ್ಷ ರೂಪಾಯಿಗಳನ್ನು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದರು ಎಂದರೆ ಸರಿಯಲ್ಲ. ಅದೇ ದಿವಸ ಪೊಲೀಸರು ಪಂಚರ ಸಮಕ್ಷಮ ಆರೋಪಿ ನಂ.1 ರಿಂದ 8 ಲಕ್ಷ 50 ಸಾವಿರ ರೂಪಾಯಿ , ಆರೋಪಿ ನಂ.2 ರಿಂದ 80 ಸಾವಿರ ರೂಪಾಯಿ , ಆರೋಪಿ ನಂ.4 ರಿಂದ 2 ಲಕ್ಷ 50 ಸಾವಿರ ರೂಪಾಯಿ , ಆರೋಪಿ ನಂ.5 ರಿಂದ 2 ಲಕ್ಷ 25 ಸಾವಿರ ರೂಪಾಯಿ , ಆರೋಪಿ ನಂ.8 ರಿಂದ 75 ಸಾವಿರ ರೂಪಾಯಿಗಳನ್ನು ಜಪ್ತಿಪಡಿಸಿಕೊಂಡರು ಎಂದರೆ ಸರಿಯಲ್ಲ. ಅಲ್ಲದೇ ಒಂದು ಟವೆರಾ ಗಾಡಿ ಸಂಖ್ಯೆ.ಜಿಜೆ.09/ಬಿಬಿ4172 ಮತ್ತು ಸೂಕ್ರ ಡ್ರೈ ವರಗಳನ್ನು ಕೂಡಾ ಜಪ್ತಿಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ವಿಚಾರದಲ್ಲ ಪೊಲೀಸರು ನನ್ನನ್ನು ಈಗ ಓದಿ ಹೇಳಿದ ನಿಪಿ.15 ರಂತೆ ಹೇಳಿಕೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

ದಿ.08.06.2015 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ನ್ಯಾಯಾಲಯದ ಮುಂದೆ ಇರುವ 9

ಮತ್ತು 10 ನೇ ಆರೋಪಿತರನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿಯವರನುನ ವಿಚಾರಿಸಲಾಗಿ ಅವರು ಈ ಮೊದಲು ನೋಡಿದ 8 ಜನ ಆರೋಪಿತರ ಜೊತೆ ಅಪರಾಧಿಕ ಒಳಸಂಚು ಮಾಡಿ ಕಳ್ಳತನ ಮಾಡಿದ್ದು ಗೊತ್ತಾಯಿತು ಎಂದರೆ ಸರಿಯಲ್ಲ. ಅಲ್ಲದೇ ಪೊಲೀಸರು ಆರೋಪಿ ನಂ.1 ಇವರಿಂದ 50 ಸಾವಿರ ಹಣ , ಒಂದು ಕಪ್ಪುಬಣ್ಣದ ಲ್ಯಾಪಟಾಪ್ ಬ್ಯಾಗ , 3 ವಿಸಿಟಿಂಗ್ ಕಾರ್ಡಗಳನ್ನು , 2 ನೇ ಆರೋಪಿತನಿಂದ 65 ಸಾವಿರ ರೂಪಾಯಿ ಹಣ , ಜಿಜೆ01/ಎಸ್‌ಟಿ.4826 ಮೋಟಾರ ಸೈಕಲ್ ನ್ನು , 3 ನೇ ಆರೋಪಿತನಿಂದ 4 ಲಕ್ಷ ಹಣ , 4 ನೇ ಆರೋಪಿತನಿಂದ 40 ಸಾವಿರ ರೂಪಾಯಿ ಹಣ ಮತ್ತು ಜಿಜೆ.01/ಎಲ್ ಎಸ್ 4453 ಮೋಟಾರ ಸೈಕಲ್ ನ್ನು , 5 ನೇ ಆರೋಪಿತನಿಂದ 25 ಸಾವಿರ ಹಣ , 6 ನೇ ಆರೋಪಿತನಿಂದ 90 ಸಾವಿರ ರೂಪಾಯಿ ಹಣ ಹಾಗೂ ಜಿಜೆ.01/ಎನಜೆ.5890 ಮೋಟಾರ ಸೈಕಲ್‌ನ್ನು , 7 ನೇ ಆರೋಪಿತನಿಂದ 80 ಸಾವಿರ ಹಣವನ್ನು ಜಪ್ತಿಪಡಿಸಿಕೊಂಡಿದ್ದನ್ನು ನನಗೆ ತೋರಿಸಿದ್ದರು ಎಂದರೆ ಸರಿಯಲ್ಲ. ಅಲ್ಲದೇ 9 ನೇ ಆರೋಪಿತನಿಂದ 10 ಸಾವಿರ ರೂಪಾಯಿ , 10 ನೇ ಆರೋಪಿತನಿಂದ 10 ಸಾವಿರ ಹಣ ಮತ್ತು ಜಿಜೆ 01/ಪಿಎಸ್9855 ಬೈಕನ್ನು ಜಪ್ತಿಪಡಿಸಿಕೊಂಡ ವಿಷಯ ತಿಳಿಯಿತು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ನಾನು ಈಗ ಓದಿ ಹೇಳಿದ ನಿಪಿ.16 ರಂತೆ ಮರುಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಮತ್ತು ಅವರಿಂದ ಜಪ್ತಿಪಡಿಸಿಕೊಂಡ ವಸ್ತುಗಳನ್ನು ನೋಡಿ ನಿಪಿ.15 ಮತ್ತು 16 ರಂತೆ ಹೇಳಿಕೆ ನೀಡಿದ್ದರೂ ಕೂಡಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

ಮರು ವಿಚಾರಣೆ : ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಫ್ , ಹುಬ್ಬಳ್ಳಿ.